# ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
## ನಂದಿನಗರ, ಬೀದರ–585 401

**ಕುಲಸಚಿವರ ಕಚೇರಿ**

ದೂರವಾಣಿ: ಕಛೇರಿ: 08482–245241
ಫ್ಯಾಕ್ಸ್ ನಂ: 08482–245360
Website:www.kvafsu.kar.in

ಸಂಖ್ಯೆ: ಕುಸ:ಕಪಪಮಿವಿವಿ:ಬೋ.ನೌ:ಮುಂ.ಅ:ಪಟ್ಟಿ:2018–19 ದಿನಾಂಕ: 05.07.2018

## ಸುತ್ತೋಲೆ

**ವಿಷಯ:** ಬೋಧಕೇತರ ಸಿಬ್ಬಂದಿಯವರ ವಿವಿಧ ವೃಂದಗಳ ಪದೋನ್ನತಿಗಾಗಿ ತಾತ್ಕಾಲಿಕ ಅರ್ಹತಾ ಪಟ್ಟಿಗಳನ್ನು ಸಿಬ್ಬಂದಿಗಳ ಗಮನಕ್ಕೆ ತರುತ್ತಿರುವ ಕುರಿತು.

**ಉಲ್ಲೇಖ:** 1. ಸಂಖ್ಯೆ: ಕುಸ/ಕಪಪಮಿವಿವಿ/ಬೋ.ನೌ./ಅಂ.ಜೇ.ಪಟ್ಟಿ/2018–19/1836 ದಿನಾಂಕ: 30.06.2018.
2. ವೃಂದ ಮತ್ತು ನೇಮಕಾತಿ ನಿಯಮಾವಳಿ, ಕಪಪಮೀವಿವಿ, ಬೀದರ.
3. No:R/65BOM/C&R Amendment/2014-15 Dated:13.08.2014.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 05.07.2018

* * * * *

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ನಂದಿನಗರ, ಬೀದರ ಇದರ ವ್ಯಾಪ್ತಿಗೆ ಒಳಪಟ್ಟಿರುವ ವಿವಿಧ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಯವರಿಗೆ ಉಲ್ಲೇಖ (1) ರಂತೆ ವಿವಿಧ ವೃಂದಗಳ ಸೇವಾ ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಅಂತಿಮಗೊಳಿಸಿ ಅಧಿಸೂಚನೆ ಹೊರಡಿಸಲಾಗಿದೆ.

ಮುಂದುವರೆದು ಸ್ಥಳೀಯ ವೃಂದ, ಉಳಿಕೆ ಮೂಲ ವೃಂದ ಹಾಗೂ ರಾಜ್ಯ ಮಟ್ಟದ ಹುದ್ದೆಗಳ ಪದೋನ್ನತಿಗಾಗಿ ತಾತ್ಕಾಲಿಕ ಅರ್ಹತಾ ಪಟ್ಟಿಗಳನ್ನು ಪ್ರಕಟಿಸಲಾಗಿದ್ದು, ಈ ಅರ್ಹತಾ ಪಟ್ಟಿಗಳನ್ನು ಎಲ್ಲಾ ಆವರಣದ ಮುಖ್ಯಸ್ಥರು ತಮ್ಮಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಗಮನಕ್ಕೆ ತರಲು ಈ ಮೂಲಕ ಸೂಚಿಸಲಾಗಿದೆ. ಈ ಪದೋನ್ನತಿಯ ಅರ್ಹತಾ ಪಟ್ಟಿಗಳಿಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಸಿಬ್ಬಂದಿಯವರು ತಮ್ಮ ಮೇಲಾಧಿಕಾರಿಯವರ ಮುಖಾಂತರ **ದಿನಾಂಕ: 16.07.2018** ರ ಒಳಗಾಗಿ ಈ ಕಚೇರಿಗೆ ತಲುಪುವಂತೆ ಕಳುಹಿಸಿಕೊಡಲು ಸೂಚಿಸಲಾಗಿದೆ.

ಸದರಿ ಪದೋನ್ನತಿಯ ತಾತ್ಕಾಲಿಕ ಅರ್ಹತಾ ಪಟ್ಟಿಯು ವಿಶ್ವವಿದ್ಯಾಲಯದ ಅಂತರ್ಜಾಲ www.kvafsu.edu.in ದಲ್ಲಿಯೂ ಸಹ ಲಭ್ಯವಿದೆ.

ಸಹಿ/–
**ಕುಲಸಚಿವರು**

**ಪ್ರತಿಯನ್ನು:**

1. ವಿಶ್ವವಿದ್ಯಾಲಯದ ಎಲ್ಲಾ ಡೀನ್ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ವಿಶ್ವವಿದ್ಯಾಲಯದ ಎಲ್ಲಾ ಅಧಿಕಾರಿಯವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ವಿಶ್ವವಿದ್ಯಾಲಯದ ಎಲ್ಲಾ ಸಂಶೋಧನಾ ಕೇಂದ್ರ ಮುಖ್ಯಸ್ಥರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
4. ಪ್ರಧಾನ ಕಾರ್ಯದರ್ಶಿ, ಬೋಧಕೇತರ ನೌಕರರ ಸಂಘ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರ ಸಂಘ, ಕಪಪಮೀವಿವಿಯ ಹೈದ್ರಾಬಾದ–ಕರ್ನಾಟಕ ನೌಕರರ ಸಂಘ ಹಾಗೂ ದಿನಗೂಲಿ ಮತ್ತು 'ಡಿ' ದರ್ಜೆ ನೌಕರರ ಸಂಘ ಕಪಪಮೀವಿವಿ, ಬೀದರ ಇವರ ಮಾಹಿತಿಗಾಗಿ
5. ಮಾನ್ಯ ಕುಲಪತಿಗಳ ಹಿರಿಯ ಆಪ್ತ ಕಾರ್ಯದರ್ಶಿ, ಕಪಪಮೀವಿವಿ, ಬೀದರ ಇವರ ಮಾಹಿತಿಗಾಗಿ
6. ಕಚೇರಿ ಕಡತಕ್ಕೆ.